ಇದರಲ್ಲಿ ಅಡಗಿತ್ತು.

ಸ್ವಯಂವರದ ಮಂಟಪದ ಮಧ್ಯದಲ್ಲಿ ಎತ್ತರದ ವೇದಿಕೆ. ಅದರ ಮೇಲೆ ಒಂದು ಬೃಹತ್ ಬಿಲ್ಲು, ಬಗ್ಗಿಸಿ ಕಟ್ಟಲು ಬಲವಾದ ಹುರಿ, ಹರಿತವಾದ ಹಲವಾರು ಬಾಣಗಳು ಇಡಲಾಗಿತ್ತು. ವೇದಿಕೆಯ ಮಧ್ಯದಲ್ಲಿ ಹೂತಿದ್ದ ಸ್ತಂಭದ ಮೇಲಿನ ತುದಿಯಲ್ಲಿ ಯಾಂತ್ರಿಕ ಮೀನೊಂದು ವೇಗವಾಗಿ ತಿರುಗುತ್ತಿತ್ತು. ಅದರಡಿ ಇತ್ತು ತೈಲದ ಪುಟ್ಟ ಕೊಳ. ಕನ್ಯಾರ್ಥಿಗಳು ತೈಲದಲ್ಲಿ ಮೂಡಿದ ಮೀನಿನ ಪ್ರತಿಬಿಂಬದತ್ತ ದೃಷ್ಟಿ ಕೇಂದ್ರೀಕರಿಸಿ ಅದರ ಕಣ್ಣಿಗೆ ಗುರಿಯಿಟ್ಟು ಬಾಣ ಬಿಡಬೇಕಿತ್ತು. ಈ ಕಠಿಣ ಪಂಥದ ವಿವರ ಕೇಳಿಯೇ ತಮಗಾಗಿ ಬರದೆಂದು ಕೆಲವರು ಹಿಂಜರಿದರೆ ಸೊಕ್ಕಿ ಮೆರೆಯುತ್ತಿದ್ದ ಜರಾಸಂಧ, ದುರ್ಯೋಧನ, ಶಿಶುಪಾಲರು ಪ್ರಯತ್ನಿಸಿ ವಿವಿಧ ಹಂತದಲ್ಲಿ ಪರಾಜಿತರಾದರು. ಯಾದವರ ಬಲರಾಮ ಮೇಲೆದ್ದಾಗ ಪಕ್ಕದಲ್ಲಿದ್ದ ಕೃಷ್ಣ ತಡೆದ. 'ಅಣ್ಣಾ, ತಂಗಿಯನ್ನು ವರಿಸುವುದೇ? ನೀನೀ ಪಂಥದಲ್ಲಿ ಪಾಲ್ಗೊಳ್ಳಬೇಡ' ಎಂದ. ಅವನಿಗೆ ಅಚ್ಚರಿ! 'ಪಾಂಚಾಲಿ ನಮಗೆ ತಂಗಿಯೇ? ಎಂದಿನಿಂದ?' ಕೇಳಿದ.

'ಈಗಲ್ಲ. ಇನ್ನು ಮುಂದೆ ನಮಗೆ ತಂಗಿಯಾಗುವವಳು' ಎಂದ ಕೃಷ್ಣ ಒಗಟಿನಂತೆ. ಚಿಕ್ಕಂದಿನಿಂದ ತಮ್ಮನಿಗೆ ಸಂಪೂರ್ಣವಾಗಿ ಮಾರುಹೋಗಿದ್ದ ಬಲರಾಮ ಹೆಚ್ಚು ವಿವರ ಕೇಳದೆ ತನ್ನ ಸ್ಥಾನದಲ್ಲಿ ಕುಳಿತ.

ಕೊನೆಯವನಾಗಿ ಬಂದ ಕರ್ಣ ತನ್ನಾಸನ ಬಿಟ್ಟೆದ್ದಾಗ ಪಾಂಚಾಲಿಯ ಸಖಿ ಕಿವಿಯಲ್ಲಿ ಉಸುರಿದಳು. 'ದೇವಿ, ಪರಾಕ್ರಮದಲ್ಲಿ, ಬಿಲ್ಲಾತುರ್ಯದಲ್ಲಿ ಈತ ಅರ್ಜುನನಿಗೆ ಸಮವಂತೆ. ನೋಡಲೂ ಅರ್ಜುನನ ಪ್ರತಿರೂಪವಂತೆ. ಈತ ವಿಜಯಿಯಾದಾನು. ನೀ ಕೊರಳ ಮಾಲೆಯೊಡನೆ ಸಿದ್ಧವಾಗಿರು' ಎಂದಳು ಬಲು ನಿರೀಕ್ಷೆಯಿಂದ. ಕರ್ಣ ತುಸುವೂ ಶ್ರಮ ಪಡದೆ ತೈಲದಲ್ಲಿಯ ಪ್ರತಿಬಿಂಬ ನೋಡುತ್ತಲೇ ಮೀನಿನ ಕಣ್ಣಿನತ್ತ ಬಾಣ ಹೊಡೆದ. ಸಭಾಗೃಹ ಜೈ ಜೈಕಾರದಿಂದ ತುಂಬಿ ಹೋಯಿತು. ಪಾಂಚಾಲಿ ಆಸನ ಬಿಟ್ಟೆದ್ದು ಒಂದೆರಡು ಹೆಜ್ಜೆ ಮುಂದಿಟ್ಟಳು. ತೀರ್ಪುಗಾರರು ಮೀನನ್ನು ಪರೀಕ್ಷಿಸಿ ಬಾಣ ಕಣ್ಣಿಗೆ ತಾಗದೆ ಕೊರಳಿಗೆ ತಾಗಿರುವುದರಿಂದ ಅಂಗರಾಜ ಜಯಶಾಲಿಯಲ್ಲ ಎಂದು ಘೋಷಿಸಿಬಿಟ್ಟರು.

ಪಾಂಚಾಲಿಯನ್ನು ವರಿಸುವ ಪರಾಕ್ರಮಿ ಆರ್ಯಾವರ್ತದಲ್ಲಿಲ್ಲವೇ? ಆಕೆ ಅವಿವಾಹಿತೆಯಾಗಿಯೇ ಉಳಿಯಬೇಕೇ? ಈ ಪ್ರಶ್ನೆ ಎಲ್ಲರಮನದಲ್ಲೆದ್ದು ಚರ್ಚೆಗೆ ಗ್ರಾಸವಾಯಿತು.

ಸ್ವಯಂವರದ ನಿಯಮದಂತೆ ಕ್ಷತ್ರಿಯರು ಯಾರೂ ಜಯಿಸದಿದ್ದರಿಂದ ಅಲ್ಲಿ ನೆರೆದಿದ್ದ ವಿಪ್ರೋತ್ತಮರು ಪಾಲ್ಗೊಳ್ಳಬಹುದೆಂದು ಕನ್ಯಾಪಿತೃ ದ್ರುಪದ ಆಹ್ವಾನಿಸಿದ. ಆದರೆ ಕ್ಷತ್ರಿಯ ವೀರರಿಂದ ಇದಕ್ಕೆ ಬಲವಾದ ವಿರೋಧ ವ್ಯಕ್ತವಾಯಿತು. ವ್ಯಾಯಾಮ ಮಾಡಿ ಬಲಿಷ್ಠರಾಗಿದ್ದ ಕ್ಷತ್ರಿಯರಿಗೇ ಸಾಧ್ಯವಾಗದ್ದು ಮೂಗು ಹಿಡಿದು ಮಂತ್ರ ಹೇಳುವ ವಿಪ್ರರಿಗೆ ಸಾಧ್ಯವಾಗುವುದೇ? ಇದು ಮಂತ್ರಕ್ಕೆ ಉದುರುವ ಮಾವಿನಕಾಯಿಯಲ್ಲ. ಬಾಹುಬಲದಿಂದ ಜಯಿಸಬೇಕಾದದ್ದು ಎಂಬ ಕುಚೋದ್ಯದ ಮಾತುಗಳು ಕೇಳಿಬಂದವು. ಕುಚೋದ್ಯದ ನಡುವೆಯೇ ವಿಪ್ರರ ಗುಂಪಿನಿಂದ ವ್ಯಕ್ತಿಯೊಬ್ಬ ಮೇಲೆದ್ದ. ವಿಪ್ರರಿಗೆ ಅಪರೂಪವೆನಿಸುವ ಎತ್ತರದ ದೃಢವಾದ ಮೈಕಟ್ಟು, ನುಣ್ಣನೆ ತಲೆ, ಹಿಂದ ಜೋಲಾಡುತ್ತಿದ್ದ ಶಿಖೆ, ಪೂರ ಹಣೆ ಮುಚ್ಚುವಂತೆ ಬಳಿದಿದ್ದ ವಿಭೂತಿ ಪಟ್ಟೆ ಹಾಕಿದ್ದ ಅವ ತನ್ನ ವಿಶಾಲವಾದ ಎದೆ ಬಾಹುಗಳನ್ನು ಉತ್ತರೀಯದಿಂದ ಮರೆ ಮಾಚಿ ಬರುತ್ತಿದ್ದ. ದುರ್ಯೋಧನ ಕರ್ಣರು ಪರಸ್ಪರ ನೋಡಿಕೊಂಡರು. ಯಾರೀತ? ನಡೆ ಪರಿಚಿತವೆನಿಸುತ್ತಿದೆ! ಆದರೆ ತಲೆ ತಗ್ಗಿಸಿ ಬರುತ್ತಿರುವವನ ಮುಖ ಚಹರೆ ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ನಮ್ಮನ್ನೇ ಮೀರಿಸಲು ಪ್ರಯತ್ನಿಸುತ್ತಿರುವ ಇವನ ಧೈರ್ಯ ಎಷ್ಟಿದ್ದೀತು? ಅಸಾಧ್ಯವಾದದ್ದನ್ನು ಸಾಧಿಸಲು ಹೋಗಿ ಹಾಸ್ಯಾಸ್ಪದವಾಗುವುದನ್ನು ನೋಡಿ ಬಿಡೋಣ ಎಂಬ ನಿರೀಕ್ಷೆಯಲ್ಲಿ ಇಬ್ಬರೂ ಕಾದರು.

ಸಂಪೂರ್ಣ ಆತ್ಮವಿಶ್ವಾಸದಿಂದ ನಡೆದು ಬಂದ ಆ ವ್ಯಕ್ತಿ ಮೊದಲು ದ್ರುಪದನಿಗೆ ನಮಿಸಿ ವೇದಿಕೆ ಏರಿದ. ಮಕ್ಕಳಾಟಿಕೆ ಎನಿಸುವಷ್ಟು ಸರಳವಾಗಿ ಬಾಣವನ್ನೆತ್ತಿ ಕಟ್ಟಿ ಪ್ರತಿಬಿಂಬ ನೋಡುತ್ತಲೇ ಮೀನಿನ ಕಣ್ಣಿಗೆ ಗುರಿಯಿಟ್ಟು ಹೊಡೆದ. ಕ್ಷಣಾರ್ಧದಲ್ಲಿ ಇವನೇ ವಿಜಯಿಯೆಂದು ಘೋಷಣೆಯಾಯಿತು. ಇದಕ್ಕೇ ಕಾಯುತ್ತಿದ್ದಳೊ ಎನ್ನುವಂತೆ ಪಾಂಚಾಲಿ ಮುನ್ನಡೆದು ಮಾಲಾರ್ಪಣೆ ಮಾಡಿಬಿಟ್ಟಳು. ಸುತ್ತಲೆದ್ದ ಪ್ರತಿಭಟನೆ ಗಲಭೆಗಳ ನಡುವೆ ಅದೆಲ್ಲಿಂದಲೋ ಬಂದ ನಾಲ್ವರು ವಿಪ್ರರು ಅಂಗರಕ್ಷಕರಂತೆ ಇಬ್ಬರನ್ನೂ ಸುತ್ತುವರೆದು ಕ್ಷಣಾರ್ಧದಲ್ಲಿ ಅಲ್ಲಿಂದ ಮಾಯವಾದರು. ಇತ್ತ ಅವಮಾನದಿಂದ ಕುಗ್ಗಿಹೋಗಿದ್ದ ಕ್ಷತ್ರಿಯ ರಾಜರು ದ್ರುಪದನ ಮೇಲೇರಿ ಹೋಗಿ ವಾಗ್ವಾದಕ್ಕೆ ನಿಂತರು.

***

ನಗರದ ಮತ್ತೊಂದು ಬದಿಯ ಕುಂಬಾರಕೇರಿಯ ಗುಡಿಸಿಲಿನಲ್ಲಿ ಹೆಣ್ಣೊಬ್ಬಳು ಚಾಪೆಯ ಮೇಲೆ ತೋಳನ್ನು ತಲೆಗಾಸರೆ ಕೊಟ್ಟುಕೊಂಡು ಮಲಗಿದ್ದಳು. ಅಂದು ಮುಂಜಾನೆಯಷ್ಟೆ ಅವಳ ಐವರು ಗಂಡುಮಕ್ಕಳು ವಾಡಿಕೆಯಂತೆ ಭಿಕ್ಷಾಟಣೆಗೆ ಹೋಗದೆ ನಡೆಯಲಿರುವ ಅರಸುಗುವರಿಯ ಸ್ವಯಂವರದ ಬಗ್ಗೆ ಹೇಳಿದ್ದರು. ನಗರದಲ್ಲೆಲ್ಲಾ ಹಬ್ಬದ ಸಂಭ್ರಮವೆಂದೂ ಅಲ್ಲಲ್ಲಿ ಅನ್ನ ಸತ್ರಗಳಿದ್ದು ಬಂದವರಿಗೆಲ್ಲಾ ತೃಪ್ತಿಯಾಗುವಷ್ಟು ಹಬ್ಬದ ಔತಣ ನೀಡುತ್ತಿರುವರೆಂದಿದ್ದರು.

'ದಿನಾ ಭಿಕ್ಷೆಗೆ ಹೋದಾಗ ಮೂದಲಿಕೆಯ ಮಾತು ಕೇಳಿ ಕೇಳಿ ಸಾಕಾಗಿದೆ. ಅರೆಹೊಟ್ಟೆ ಉಂಡು ಮಲಗುತ್ತಿದ್ದ ನಾನು ಈ ಒಂದು ದಿನವಾದರೂ ಹೊಟ್ಟೆ ತುಂಬಾ ಉಣ್ಣುವೆನಮ್ಮಾ' ಎಂದಿದ್ದ ಹೊಟ್ಟೆಬಾಕನೆಂದು ಹೆಸರು ಮಾಡಿದ್ದ ಅವಳ ಎರಡನೆಯ ಮಗ ಭೀಮಸೇನ. ತಾಯಿಯ ಅಪ್ಪಣೆ ಪಡೆದು ಸಹೋದರರು ಅರಮನೆಯ ದಾರಿ ಹಿಡಿದಿದ್ದರು. ಮಹಾ ಪರಾಕ್ರಮಿಗಳಾದ ತನ್ನ ಮಕ್ಕಳು ರಾಜವೈಭೋಗದಲ್ಲಿ ಮೆರೆಯದೆ ಭಿಕ್ಷೆ ಬೇಡಿ ತಿನ್ನುವಂತಾದಾಗ ಕಣ್ಣೀರ್ಗರೆದಿದ್ದಳು. ವಿದುರನೇನೋ ಪರಿಸ್ಥಿತಿ ತಣ್ಣಗಾಗುವವರೆಗೂ ಇರಿ. ಒಂದು ಹದಕ್ಕೆ ಬಂದಾಗ ನಾನೇ ಕರೆಕಳಿಸುವೆ ಎಂದಿದ್ದ. ಅದ್ಯಾವಾಗ ಬರುವುದೋ? ಚಿಂತಿಸುತ್ತಿದ್ದವಳಿಗೆ ಹಾಗೇ ಜೋಂಪು ಹತ್ತಿತ್ತು.

ಹೊರಗಿನಿಂದ ಬಾಗಿಲು ಬಡಿದ ಶಬ್ದ ಜೊತೆಗೆ ಅರ್ಜುನನ ಕೊರಳಧ್ವನಿ ಕೇಳಿ ಕಣ್ಬಿಟ್ಟಳು. ದೀಪದಲ್ಲಿಎಣ್ಣೆ ತೀರುತ್ತಾ ಬಂದು ಜ್ಯೋತಿ ಮಂದವಾಗಿ ಕೋಣೆ ಮಬ್ಬಾಗಿತ್ತು. ಎದ್ದು ಬಾಗಿಲು ತೆಗೆದು ದೀಪಕ್ಕೆ ಎಣ್ಣೆ ಬಿಡಲು ತಿರುಗಿದಳಷ್ಟೇ.

'ಅಮ್ಮಾ, ಇಂದು ನಾನು ಒಂದು ಅಮೂಲ್ಯವಾದ ರತ್ನವನ್ನು ಗೆದ್ದು ತಂದಿದ್ದೇನೆ' ಎಂದ ಅರ್ಜುನ.

'ನಾನು ಗೆದ್ದೆ ಎಂದರೇನು ಮಗೂ? ಯಾರು ಗಳಿಸಿ ತಂದರೂ ಅದು ಐವರಿಗೂ ಸಮಪಾಲು ಎಂದಿದ್ದೆನಲ್ಲವೇ? ವಸ್ತು ಎಷ್ಟು ಅಮೂಲ್ಯವಾದರೂ ಸರಿ. ಎಲ್ಲರೂ ಹಂಚಿಕೊಳ್ಳಿ' ಎಂದುಬಿಟ್ಟಳು. ಒಳಬಂದ ಯುಧಿಷ್ಠಿರನಿಗೆ ತಾಯಿಯ ಮಾತು ಕಿವಿಗೆ ಬಿತ್ತು. 'ಅಮ್ಮಾ, ನೀನು ಏನು ಹೇಳುತ್ತಿರುವೆ ಎನ್ನುವ ಅರಿವಿದೆಯೇ? ಅರ್ಜುನ ಗೆದ್ದಿರುವುದು ಹಂಚಿಕೊಳ್ಳ ಬಹುದಾದ ವಸ್ತುವನ್ನಲ್ಲ. ಇಂದು ನಡೆದ ಸ್ವಯಂವರದಲ್ಲಿ ನನ್ನ ತಮ್ಮ ದ್ರುಪದ ರಾಜಕುಮಾರಿ ಪಾಂಚಾಲಿಯನ್ನು ಗೆದ್ದಿದ್ದಾನೆ. ನೋಡಿಲ್ಲಿ'

ಮದುಮಗಳಂತೆ ಸಿಂಗರಿಸಿಕೊಂಡಿದ್ದ ಪಾಂಚಾಲಿ ಮುಂದೆ ಬಂದು ಕುಂತಿಯ ಕಾಲಿಗೆರಗಿ ಅವಳ ಆಶೀರ್ವಾದ ಪಡೆದು ಮೇಲಕ್ಕೆದ್ದಳು. ಅವಳನ್ನು ನೋಡುತ್ತಿದ್ದಂತೆ ಕುಂತಿಗೆ ತಾನಾಡಿದ ಮಾತಿನ ಪರಿಣಾಮ ಇರಿಯಿತು.

'ಅಯ್ಯೋ ಭಗವಂತ, ನನ್ನ ನಾಲಗೆಗಿಂದು ಅದೇನು ಬಡಿಯಿತೋ ಕಾಣೆ. ನಾನಂದದ್ದು ತಪ್ಪು. ನನ್ನ ಮಾತನ್ನು ಮರೆತುಬಿಡು ಅರ್ಜುನ.'

'ಅಮ್ಮಾ, ಅದನ್ನು ಮರೆಯುವ ಮಾತೇ ಇಲ್ಲ. ಹುಟ್ಟಿದಂದಿನಿಂದ ನಮಗೆ ನಿನ್ನ ಮಾತೇ ವೇದ ವಾಕ್ಯು. ನಾವದಕ್ಕೆ ಸದಾ ಬದ್ಧ. ಇಂದೇಕೆ ಅದಕ್ಕೆ ವಿರೋಧವಾಗಿ ನಡೆಯಬೇಕು? ಪಾಂಚಾಲಿ ನನ್ನ ವಧುವಾದರೂ ನಿನ್ನ ಮಾತಿನಂತೆ ನಾವೈವರೂ ಅವಳನ್ನು ವರಿಸುತ್ತೇವೆ' ಎಂದ ಅರ್ಜುನ.

'ಅಯ್ಯೋ ಬೇಡಪ್ಪ. ಅದು ಧರ್ಮಕ್ಕೆ ವಿರೋಧ. ನನ್ನ ಬುದ್ಧಿಗಿಂದು ಮಂಕು ಬಡಿದು ನಾಲಗೆ ಹಿಡಿತದಲ್ಲಿಲ್ಲದೆ ಏನೇನೋ ಆಡಿಬಿಟ್ಟಿತು. ಅದಕ್ಕೆ ನೀವು ಖಂಡಿತಾ ಬದ್ಧರಲ್ಲ ಮಕ್ಕಳೇ.'

'ಅತ್ತೇ, ಹಾಗೆನ್ನಬೇಡ. ನೀನು ನಂಬಿರುವ ದೈವವೇ ನಿನ್ನಿಂದ ಈ ಮಾತನ್ನಾಡಿಸಿದೆ. ಇದನ್ನು ದೈವೇಚ್ಛೆ ಎಂದು ನಿನ್ನ ಮಕ್ಕಳು ಪುರಸ್ಕರಿಸಲೇ ಬೇಕು' ಎಂದು ಹೇಳುತ್ತಾ ಹೊರ ಕತ್ತಲಿನಿಂದ ಒಳಬೆಳಕಿಗೆ ಬಂದ ವ್ಯಕ್ತಿ ಕುಂತಿಗೆ ನಮಸ್ಕರಿಸಿದ. ಯಾದವ ಕೃಷ್ಣನನ್ನು ಕಂಡ ಅವಳು ಸಂಭ್ರಮಿಸಿದಳು. ಅರ್ಜುನನಂತೂ ಪ್ರಾಣ ಸಖನನ್ನು ಕಂಡು ಬಿಗಿದಪ್ಪಿದ.

'ಕೃಷ್ಣ, ನೀನ್ಯಾವಾಗ ಬಂದೆ?'

'ಸ್ವಯಂವರದ ಮಂಟಪದಿಂದ ನಿನ್ನ ಮಕ್ಕಳನ್ನೂ ನೂತನ ವಧುವನ್ನೂ ಹಿಂಬಾಲಿಸಿ ಬಂದೆ. ನೀವೆಲ್ಲಾ ಅಗ್ನಿಯಲ್ಲಿ ಬೆಂದು ಹೋದರೆಂಬ ವರ್ತಮಾನ

